# Election Awareness Camp
# 20th March 2019




## “ವಿದ್ಯಾವರ್ಧಕ ಕಾಲೇಜಿನಲ್ಲಿ ಸಂಕಲ್ಪ ಪತ್ರ ಹಾಗೂ ಪ್ರತಿಜ್ಞಾ ವಿಧಿ”

ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನಲ್ಲಿ ಮೈಸೂರು ವಲಯ ಕಾಲೇಜು ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕರ ಕಛೇರಿ ಸುತ್ತೋಲೆ ಸಂಖ್ಯೆ:ಪ್ರಾಕಾಮ್ಯೆ/ಕಾಶಿಇ/191/ ಇ.ಎಲ್.ಸಿ/2018–19, ದಿನಾಂಕ:18.03.2019ರ ಪ್ರಕಾರ ಲೋಕಸಭಾ ಸುನಾವಣಾ 2019ಕ್ಕೆ ಸಂಬಂಧಿಸಿದಂತೆ' **“ಸಂಕಲ್ಪ ಪತ್ರ ಹಾಗೂ ಪ್ರತಿಜ್ಞಾ ವಿಧಿ”**ಯನ್ನು ದಿನಾಂಕ:20.03.2019ರ ಬುಧವಾರದಂದು ಬೆಳಿಗ್ಗೆ 11.00 ಗಂಟೆಗೆ ಪ್ರಾಂಶುಪಾಲರಾದ ಡಾ.ಎಸ್.ಮರೀಗೌಡರವರ ಅಧ್ಯಕ್ಷತೆಯಲ್ಲಿ ಬೋಧಿಸಲಾಯಿತು. ಉಲ್ಲೇಖಿತ ಪತ್ರದ ಜೊತೆಯಲ್ಲಿ ಲಗತ್ತಿಸಲಾಗಿದ್ದ ಪ್ರತಿಜ್ಞಾವಿಧಿಯನ್ನು ಎಲ್ಲಾ ವಿದ್ಯಾರ್ಥಿಗಳಿಗೆ ಬೋಧಿಸಿ ಸಂಕಲ್ಪ ಪತ್ರವನ್ನು ವಿದ್ಯಾರ್ಥಿಗಳ ಮೂಲಕ ಅವರ ಪೋಷಕರಿಗೆ ವಿತರಿಸಲಾಯಿತು.

ಮುಂಬರುವ ಲೋಕಸಭಾ ಚುನಾವಣಾ 2019ರ ಪ್ರಯುಕ್ತ ಒಳಗೊಳ್ಳುವ ಸುಗಮ ಮತ್ತು ನೈತಿಕ ಮತದಾನ ಎಂಬ ವಿಷಯದ ಕುರಿತು ಮತದಾನದಲ್ಲಿ ಭಾಗವಹಿಸುವಂತೆ ವಿದ್ಯಾರ್ಥಿಗಳನ್ನು ಕುರಿತು ತಿಳುವಳಿಕೆಯನ್ನು ನೀಡಿದರು ಹಾಗೂ ತಮ್ಮ ಪೋಷಕರಿಗೆ ಈ ಮೂಲಕ ಮತದಾನದ ಬಗ್ಗೆ ಜಾಗೃತಿಯನ್ನು ತಿಳಿ ಹೇಳಿ ಕುಟುಂಬದ ಸದಸ್ಯರೆಲ್ಲರೂ ಕಡ್ಡಾಯವಾಗಿ ದಿನಾಂಕ:18.04.2019ರಂದು ನಡೆಯುವ ಲೋಕಸಭಾ ಚುನಾವಣೆಗೆ ಮತದಾನವನ್ನು ಕಡ್ಡಾಯವಾಗಿ ಮಾಡಲೇ ಬೇಕು ಎಂದು ಮಾರ್ಗದರ್ಶನ ನೀಡಿದರು. ಈ ಕಾರ್ಯಕ್ರಮದಲ್ಲಿ ಕಾಲೇಜಿನ ಅಧ್ಯಾಪಕ ವರ್ಗದವರು ಹಾಜರಿದ್ದು ಕಾರ್ಯಕ್ರಮದ ಯಶಸ್ಸಿಗೆ ಕಾರಣೀಕರ್ತರಾದರು. ರಾಜ್ಯಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಶ್ರೀ.ಮೋಹನ್ ಕುಮಾರ್.ಎನ್ ರವರು ವಿದ್ಯಾರ್ಥಿಗಳಿಗೆ ಚುನಾವಣೆ, ಮತದಾನ, ಸಂವಿಧಾನ ಮತ್ತು ಮತದಾರರ ಕರ್ತವ್ಯಗಳ ಬಗ್ಗೆ ಸವಿವರವಾಗಿ ವಿವರಿಸಿದರು. ಈ ಕಾರ್ಯಕ್ರಮದಲ್ಲಿ ಹಾಜರಿದ್ದವರವನ್ನು ಕನ್ನಡ ಸಹಾಯಕ ಪ್ರಾಧ್ಯಾಪಕರಾದ ಶ್ರೀ.ಮಂಜು.ಜೆ ರವರು ಸ್ವಾಗತಿಸಿ, ವಂದಿಸಿದರು.


FINAL BCOM.STUDENTS.1886-87
















P.By. FINAL BCOM. STUDENTS.

